ಸಂಖ್ಯೆ : No. ಬೆಂಅಪ್ರಾ/ನಯೋಸ/ CLU-332/13-14/ 2949 /2014-15. ದಿನಾಂಕ : Date : 17/11/14

# ಪ್ರಾರಂಭಿಕ ಪ್ರಮಾಣ ಪತ್ರ

ವಿಷಯ: ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಗೂಳಿಮಂಗಲ ಗ್ರಾಮದ ಸರ್ವೆ ನಂ. 139/3 [ಹಳೆಯ ನಂ. 68/3] ರಲ್ಲಿನ 01 ಎಕರೆ 25.64 ಗುಂಟೆ ಅಥವಾ 6640.99 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆ [ಹೈಟೆಕ್] ಉಪಯೋಗದಿಂದ ವಸತಿ ಉಪಯೋಗಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ [3] ರಂತೆ ಭೂ-ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ಶುಭಾದೇವ ಸಾನ ರವರ ಪರವಾಗಿ ಜಿಪಿಎ ದಾರರಾದ ಶ್ರೀ ಕುಮಾರ್ ನಾಡಿಗ, ಮೆ: ಸ್ಕೈಕಾನ್ ಹೋಮ್ಸ್ ಎಲ್.ಎಲ್.ಪಿ. ರವರು ಕೋರಿರುವ ಬಗ್ಗೆ.

ಉಲ್ಲೇಖ:
1. ದಿನಾಂಕ 05.08.2014 ರ ಅರ್ಜಿದಾರರ ಮನವಿ.
2. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ Sub section [3] ರಂತೆ ಕ್ರಮ ವಹಿಸಿರುವುದು.
3. ಆಯುಕ್ತರವರ ಅನುಮೋದನೆ ದಿನಾಂಕ 25.10.2014.
4. ಈ ಕಛೇರಿಯ ಪತ್ರ ಸಂಖ್ಯೆ ಬೆಂಅಪ್ರಾ/ನಯೋಸ/CLU-332/2013-14/2754/2014-15, ದಿನಾಂಕ 29.10.2014 ರಲ್ಲಿ ಭೂ ಉಪಯೋಗ ಬದಲಾವಣೆ ಸಂಬಂದ ಅರ್ಜಿದಾರರಿಗೆ ₹. 3,00,250/- ಗಳನ್ನು ಪಾವತಿಸಲು ತಿಳಿಸಿರುವುದು.
5. ಅರ್ಜಿದಾರರು ದಿನಾಂಕ 30.10.2014 ರಂದು ಕೆನರಾ ಬ್ಯಾಂಕ್ ನ ಚಲನ್ ನಂ. 33346 ರ ಮೂಲಕ ₹. 3,00,250/- ಗಳನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡಿದ್ದು, ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ದಿನಾಂಕ 06.11.2014 ರಂದು ಹಣ ಸಂದಾಯವಾದ ಬಗ್ಗೆ ದೃಢೀಕರಿಸಿರುವುದು.

ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಗೂಳಿಮಂಗಲ ಗ್ರಾಮದ ಸರ್ವೆ ನಂ. 139/3 [ಹಳೆಯ ನಂ. 68/3] ರಲ್ಲಿನ 01 ಎಕರೆ 25.64 ಗುಂಟೆ ಅಥವಾ 6640.99 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆ [ಹೈಟೆಕ್] ಉಪಯೋಗದಿಂದ ವಸತಿ ಉಪಯೋಗಕ್ಕೆ ಭೂ-ಉಪಯೋಗ ಬದಲಾವಣೆಯನ್ನು ಉಲ್ಲೇಖ [1] ರ ಅರ್ಜಿಯಲ್ಲಿ ಕೋರಲಾಗಿರುತ್ತದೆ. ಈ ಸಂಬಂಧ ಉಲ್ಲೇಖ [2] ರಲ್ಲಿ ಅವಕಾಶ ಕಲ್ಪಿಸಿರುವಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14[ಎ] Subsection [3] ರ [Deemed Permission] ಅಡಿಯಲ್ಲಿ ಸದರಿ ಜಮೀನನ್ನು ಕೈಗಾರಿಕೆ [ಹೈಟೆಕ್] ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಮಾನ್ಯ ಆಯುಕ್ತರು ಉಲ್ಲೇಖ [3] ರಲ್ಲಿ ಅನುಮೋದನೆ ನೀಡಿ ಆದೇಶಿಸಿದ್ದು, ಅದರಂತೆ ಸದರಿ ಜಮೀನಿನ ಭೂ ಉಪಯೋಗ ಬದಲಾವಣೆ ಕುರಿತಂತೆ ಒಟ್ಟು ಮೊತ್ತ ₹. 3,00,250/- [₹. ಮೂರು ಲಕ್ಷದ ಇನ್ನೂರೈವತ್ತು ಮಾತ್ರ] ಗಳನ್ನು ಸಂದಾಯ ಮಾಡುವಂತೆ ಉಲ್ಲೇಖ [4] ಪತ್ರದಲ್ಲಿ ತಿಳಿಸಲಾಗಿತ್ತು. ಅದರಂತೆ ₹. 3,00,250/- [₹. ಮೂರು ಲಕ್ಷದ ಇನ್ನೂರೈವತ್ತು ಮಾತ್ರ] ಗಳನ್ನು

ಚಲನ್ ಸಂಖ್ಯೆ 33346 ರಲ್ಲಿ ಪ್ರಾಧಿಕಾರಕ್ಕೆ ಸಂದಾಯ ಮಾಡಿದ್ದು, ಸದರಿ ಶುಲ್ಕಗಳು ಪ್ರಾಧಿಕಾರಕ್ಕೆ ಸಂದಾಯವಾಗಿರುವ ಕುರಿತಂತೆ ಪ್ರಾಧಿಕಾರದ ಆರ್ಥಿಕ ವಿಭಾಗದವರು ದೃಢೀಕರಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಗೂಳಿಮಂಗಲ ಗ್ರಾಮದ ಸರ್ವೆ ನಂ. 139/3 [ಹಳೆಯ ನಂ. 68/3] ರಲ್ಲಿನ 01 ಎಕರೆ 25.64 ಗುಂಟೆ ಅಥವಾ 6640.99 ಚ.ಮೀ. ವಿಸ್ತೀರ್ಣದ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ Subsection [3] ರಂತೆ ಕೈಗಾರಿಕೆ [ಹೈಟೆಕ್] ವಲಯದಿಂದ ವಸತಿ ಉಪಯೋಗಕ್ಕೆ ಈ ಕೆಳಕಂಡ ನಿಭಂದನೆಗಳಿಗೊಳಪಡಿಸಿ ಭೂ ಉಪಯೋಗ ಬದಲಾವಣೆಗೆ ಸಂಬಂಧಿಸಿದಂತೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

1. ಬಡಾವಣೆ / ಕಟ್ಟಡ ನಕ್ಷೆಯನ್ನು ಸಕ್ಷಮ ಪ್ರಾಧಿಕಾರದಿಂದ ವಲಯ ನಿಯಮಾವಳಿ ಅನುಸಾರ ಮಂಜೂರು ಮಾಡಿಸಿಕೊಳ್ಳುವುದು.
2. ಪ್ರಸ್ತಾಪಿತ ಜಮೀನಿನ ಸಂಬಂಧವಾಗಿ ತಪ್ಪು ಮಾಹಿತಿ / ದಾಖಲಾತಿಗಳನ್ನು ನೀಡಿದ್ದಲ್ಲಿ ಅರ್ಜಿದಾರರೇ ಹೊಣೆಗಾರರಾಗುವುದಲ್ಲದೇ ಭೂ ಉಪಯೋಗದ ಆದೇಶ ತನ್ನಿಂತಾನಾಗಿಯೇ ರದ್ದಾಗುತ್ತದೆಂದು ತಿಳಿಯುವುದು.
3. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರಾಕ್ಷೇಪಣಾ ಪತ್ರ ಪಡೆಯುವುದು ಹಾಗೂ ಅದರಲ್ಲಿನ ಷರತ್ತುಗಳನ್ನು ಪಾಲಿಸತಕ್ಕದ್ದು. ಹಾಗೂ ಮಳೆ ನೀರು ಕೊಯ್ಲು" ವ್ಯವಸ್ಥೆಯನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.
4. RMP-2015 ರೀತ್ಯ ಪ್ರಶ್ನಿತ ಜಮೀನಿನ ದಕ್ಷಿಣಕ್ಕೆ 24 ಮೀ. ಅಗಲದ ರಸ್ತೆಯನ್ನು ರಸ್ತೆಯನ್ನು ಉದ್ದೇಶಿಸಿದ್ದು, ಸದರಿ ರಸ್ತೆಗೆ ಅಗತ್ಯ ಜಾಗೆಯನ್ನು ಕಾಯ್ದಿರಿಸಲು ಬದ್ಧರಿರತಕ್ಕದ್ದು.
5. RMP-2015 ರೀತ್ಯ ಪ್ರಶ್ನಿತ ಜಮೀನ ಉತ್ತರಕ್ಕೆ 100 ಮೀ. ಅಗಲದ PRR [Peripheral Ring Road] ಅನ್ನು ಉದ್ದೇಶಿಸಿದ್ದು, ಸದರಿ PRR ಗೆ ಅಗತ್ಯ ಜಾಗೆಯನ್ನು ಕಾಯ್ದಿರಿಸಲು ಬದ್ಧರಿರತಕ್ಕದ್ದು.
6. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ / ಸಕ್ಷಮ ಪ್ರಾಧಿಕಾರ ವಿಧಿಸುವ ಇನ್ನಿತರ ನಿಬಂಧನೆಗಳನ್ನು ಪಾಲಿಸತಕ್ಕದ್ದು.

[ಕರಡು ಪತ್ರ ಆಯುಕ್ತರವರಿಂದ
ಅನುಮೋದಿಸಲ್ಪಟ್ಟಿದೆ]

17/11/14
ಆಯುಕ್ತರ ಪರವಾಗಿ,
ಬೆಂಅಪ್ರಾ, ಬೆಂಗಳೂರು

ಇವರಿಗೆ

ಶ್ರೀ ಶುಭಾದೇವ ಸಾನ
ರವರ ಪರವಾಗಿ ಜಿಪಿಎ ದಾರರಾದ
ಶ್ರೀ ಕುಮಾರ್ ನಾಡಿಗ, ಮೆಃ ಸೈಕಾನ್ ಹೋಮ್ಸ್ ಎಲ್.ಎಲ್.ಪಿ.
5ಬಿ, 1/58, 8 ನೇ ಮುಖ್ಯ ರಸ್ತೆ,
ಆರ್.ಎಂ.ವಿ. ಬಡಾವಣೆ, ಸದಾಶಿವನಗರ,
ಬೆಂಗಳೂರು 560 080.